**ದಿ:19.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಎದುರುದಾರರ **2** ಪರ ಶ್ರೀ. **A.C.T.,** ವಕೀಲರಿಂದ:-

ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಮಾಹಿತಿಯನ್ನು ನಾನೇ ನಿಡಿರುತ್ತೇನೆ . ಈ ಹಿಂದೆ ನಾನು ಅಸಲು ದಾವೆ ಸಂಖ್ಯೆ 162/2018 ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲಲ್ ನನಗೆ ದಿ:30.05.2020 ರಿಂದ ದಿ: 09.12.2022 ರವರೆಗೂ ಸುಮಾರು 2 ವರ್ಷಗಳ ಕಾಲ ನನ್ನ ಸಾಕ್ಷಿ ವಿಚಾರಣೆಗೆ ಸಮಯ ನೀಡಿರುತ್ತದೆ ಎಂದರೆ ಸರಿ. ಆದರೂ ಸಹ ನಾನು ಸದರಿ ಸಂದರ್ಬದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ತಯಾರಿರಲಿಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿಗೆ ಹುಷಾರು ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರುಇರಲಿಲ್ಲ ಎಂದು ಹೇಳುತ್ತಾರೆ . ಸದರಿ ವಿಚಾರವನ್ನು ನನ್ನ ಮುಖ್ಯವಿಚಾರಣೆ ಮತ್ತು ಅರ್ಜಿಯಲ್ಲಿ ತಿಳಿಸಿರುತ್ತೇನೆ . ನನ್ನ ಹೆಂಡತಿಗೆ ಹುಷಾರು ಇಲ್ಲದ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ . ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ . ನನ್ನ ಮುಖ್ಯವಿಚಾರಣೆಯಲ್ಲಿ ನಾನು ದಿ:09.12.2022 ರಂದು ಅನಾರೋಗ್ಯದಿಂದ ಇದ್ದೇನು ಎಂದು ಸಾಕ್ಷಿ ನೀಡಿರುತ್ತೇನೆ ಎಂದರೆ ಸರಿ. ನಾನು ಅನಾರೋಗ್ಯದಿಂದ ಇದ್ದ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಮ್ಮ ವಕೀಲರಿಗೆ ಹುಷಾರಿಲ್ಲ ಎಂದು ನನ್ನ ಮುಖ್ಯವಿಚಾರಣೆಯಲ್ಲಿ ತಿಳಿಸಿರುವುದಾಗೆ , ಸದರಿ ವಿಚಾರವನ್ನು ನಾನೇ ತಿಳಿದುಕೊಂಡಿರುತ್ತೇನೆ . ನನಗೆ ಯಾರು ತಿಳಿಸಿರುವುದಿಲ್ಲ . ಈ ಅರ್ಜಿಯಲ್ಲೂ ಸಹ ನನಗೆ ನ್ಯಾಯಾಲಯವು ಒಂದು ವರ್ಷದ ಮೇಲ್ಪಟ್ಟ ಹಾಗೆ ಸಾಕ್ಷಿ ವಿಚಾರಣೆ ಮಾಡಲು ಕಾಲಾವಕಾಶ ನೀಡಿರುತ್ತದೆ ಎಂದರೆ ಸರಿ. ನನಗೆ ದಾವೆ ನಡೆಸಲು ಆಸಕ್ತಿ ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಅರ್ಜಿಯನ್ನು ವಜಾಗೋಳಿಸಿದರೆ ಜಮೀನು ಕಳೆದುಕೊಳ್ಳುತ್ತೇನೆ . ನಾನು ಸ್ವಇಚ್ಛೆಯಿಂದಲೇ ನ್ಯಾಯಾಲಯಕ್ಕೆ ಹಾಜರು ಇರುವುದಿಲ್ಲ . ನಾನು ಎದುರುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ಅರ್ಜಿಯನ್ನು ತಿರಸ್ಕರಿಸಿದರೆ

ಮಿಸ್ .ನಂ:6/2022
ಪಿ.ಡಬ್ಲೂ.1

ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು